ದೇವರೇ, ನನ್ನ ಇಬ್ಬರೂ ಮಕ್ಕಳು ಅದು ಹೇಗೆ ಸ್ವಾರ್ಥಿಗಳಾದರು? ದುರ್ಲೋಭಿಗಳಾದರು? ಅವರಿಗೆ ಅಪ್ಪಅಮ್ಮನ ಮೇಲೆ ಸ್ವಲ್ಪವಾದರೂ ಪ್ರೀತಿ ಬೇಡವೇ. ಮಕ್ಕಳೆಂದರೆ ವೃದ್ಧಾಪ್ಯದ ಊರುಗೋಲು ಎಂದು ಹೇಳುತ್ತಾರೆ... ಇವರೆಂತಹ ಊರುಗೋಲುಗಳು, ವಿಷದ ಹಾವಿನ ಮರಿಗಳಾಗಿ ಮೈದೋರಿದರಲ್ಲ. ಭಾವ್ಯಾ ಮತ್ತು ನಾನು ಪ್ರೀತಿ ಮತ್ತು ಮಮತೆಯ ಧಾರೆಯನ್ನೇ ಇವರ ತಲೆಯ ಮೇಲೆ ಸುರಿದೆವು. ವಾತ್ಸಲ್ಯದ ಅಮೃತದಿಂದ ಪೋಷಿಸಿ ಬೆಳೆಸಿದೆವು. ಹೀಗಿರುವಾಗ ಈ ವಿಶ್ವಾಸಘಾತಕ ಸಸಿ ಹೇಗೆ ಬೆಳೆಯಿತು, ಅದರಲ್ಲಿ ವಿಷಯುಕ್ತ ಹಣ್ಣುಗಳು ಕಾಣಿಸಿಕೊಂಡದ್ದಾದರೂ ಹೇಗೆ? ಸಾವಿತ್ರಿಗೆ ಅಳು ಬಂತು. ಆಕೆ ದಿಂಬಿನಲ್ಲಿ ಮುಖವನ್ನು ಹುದುಗಿಸಿ ಬಿಕ್ಕಿಬಿಕ್ಕಿ ಅಳಲಾರಂಭಿಸಿದಳು. ಸ್ವಲ್ಪ ಹೊತ್ತು ಕಳೆದ ಬಳಿಕ ಅವಳ ಅಳು ಇದ್ದಕ್ಕಿದ್ದಂತೆ ನಿಂತು ಹೋಯಿತು. ಭಾವ್ಯಾ ನಿದ್ದೆಯಲ್ಲಿಯೇ ಖೋ ಖೋ ಎನ್ನುತ್ತಾ ನಗುತ್ತಿರುವುದು ಅವಳ ಕಿವಿಗೆ ಬಿತ್ತು. ಅವಳು ದಿಂಬಿನಿಂದ ಮುಖವೆತ್ತಿ ಭಾವ್ಯಾ ಕಡೆಗೆ ನೋಡಿದಳು. ಭಾವ್ಯಾ ಒಬ್ಬ ಮುಗ್ಧ ಬಾಲಕನ ಹಾಗೆ ಸ್ವಚ್ಛಂದವಾಗಿ ನಗುತ್ತಿದ್ದಾರೆ. ಯಾವುದೋ ಕನಸು ಕಾಣುತ್ತಿರಬೇಕು. ಸಾವಿತ್ರಿ ಅವರನ್ನು ನೋಡುತ್ತಲೇ ಇದ್ದಳು. ಹಾಗೆ ನೋಡುತ್ತಿರುವಾಗ ಅವರ ಕುರಿತು ಅವಳ ಎದೆಯಲ್ಲಿ ಪ್ರೀತಿ ತುಂಬಿತು. ಅವರು ತನ್ನ ಪತಿ ಎಂಬುದನ್ನು ಆಕೆ ಮರೆತಳು. ಭಾವ್ಯಾ ಅವಳಿಗೆ ಒಬ್ಬ ಮುಗ್ಧ ನಿಷ್ಕಲ್ಮಷ ಬಾಲಕನಾಗಿ ಗೋಚರಿಸಿದರು.

ಭಾವ್ಯಾ ಒಬ್ಬ ಕರ್ತವ್ಯಬದ್ಧ, ಜವಾಬ್ದಾರಿಯುತ ಗಂಡಸಾಗಿದ್ದವರು... ಮರ್ಯಾದಶೀಲ, ಪ್ರೀತಿವಂತ, ಸ್ವಾಭಿಮಾನಿ ಮನುಷ್ಯನಾಗಿದ್ದವರು... ಅಪ್ಪ–ಅಮ್ಮ, ಅಣ್ಣ–ತಂಗಿ, ಹೆಂಡತಿ–ಮಕ್ಕಳು, ನೆರೆಮನೆಯವರು–ಹೊರಗಿನವರು ಎಲ್ಲರನ್ನೂ ಸಂಭಾಳಿಸುತ್ತಿದ್ದ, ಎಲ್ಲರಿಗೂ ಒಳ್ಳೆಯದನ್ನು ಹಾರೈಸುತ್ತಿದ್ದ ಮನುಷ್ಯನಾಗಿದ್ದವರು. ಈಗ ಎಲ್ಲರೂ ಅವರನ್ನು ಪಕ್ಕಕ್ಕೆ ಸರಿಸಿದ್ದಾರೆ. ಮುದಿಭ್ರಾಂತಿ ಎಂದುಕೊಂಡು ಎಲ್ಲರೂ ಅವರನ್ನು ಅಪಹಾಸ್ಯ ಮಾಡುವವರೇ. ಈಗ ಅವರ ಜೊತೆಯಲ್ಲಿ ಇರುವವರು, ವಯಸ್ಸಿನ ಕಾರಣವಾಗಿ ದಣಿದ ದೇಹ ಮತ್ತು ಗಂಡನ ಕಾಯಿಲೆಯಿಂದ ವ್ಯಾಕುಲ ತುಂಬಿದ ಮನಸ್ಸಿನ ಅವರ ಜೀವನ ಸಂಗಾತಿ ಸಾವಿತ್ರಿ.

ಸಾವಿತ್ರಿಯ ಮನಸ್ಸು ಆರು ತಿಂಗಳ ಹಿಂದಿನ ಘಟನೆಯನ್ನು ನೆನಪಿಸಿಕೊಂಡಿತು.

ಇತ್ತೀಚೆಗೆ ಭಾವ್ಯಾ ಎಲ್ಲಿಯೋ ಕಳೆದು ಹೋಗಿರುವ ಹಾಗೆ ವರ್ತಿಸುತ್ತಿದ್ದರು. ಕಾರಣವಿಲ್ಲದೆ ಸಾವಿತ್ರಿಯ ಮೇಲೆ ರೇಗುತ್ತಿದ್ದರು. ಏನೇ ಕೇಳಿದರೂ ಮೈಮೇಲೆ ಏರಿ ಬಂದ ಹಾಗೆ ಉತ್ತರಿಸುವುದು. ವರಾಂಡದಲ್ಲಿ ಒಬ್ಬರೇ ಕುಳಿತು ಬಳಬಳನೆ ಅಳುವುದು... ಏನಾಗಿದೆ? ಏನಾದರೂ ಘಟಿಸಿದೆಯೇ ಎಂದು ಸಾವಿತ್ರಿ ಕೇಳಿದರೆ ಥಟ್ಟನೆ ಅಳು ನಿಲ್ಲಿಸಿ ನಿರ್ವಿಕಾರ ನೋಟದಿಂದ ಅವಳ ಮುಖವನ್ನೇ ನೋಡುತ್ತಾ ಕುಳಿತುಕೊಳ್ಳುವುದು.

ಭಾವ್ಯಾ ಹತ್ತು ವರ್ಷದ ಹಿಂದೆ ಮಾಧ್ಯಮಿಕ ಶಾಲೆಯ ಶಿಕ್ಷಕರಾಗಿ ನಿವೃತ್ತಿ ಹೊಂದಿದ್ದರು. ಆದರೆ, ಅವರ ಆರೋಗ್ಯ ತುಂಬಾ ಚೆನ್ನಾಗಿತ್ತು. ಮನೆಯ ಒಳ–ಹೊರಗಿನ ಎಲ್ಲಾ ವ್ಯವಹಾರಗಳನ್ನು ಅವರೇ ನೋಡಿಕೊಳ್ಳುತ್ತಿದ್ದರು. ಹಾಲು, ವೃತ್ತಪತ್ರಿಕೆ ತರುವುದು, ಮಾರ್ಕೆಟಿಗೆ ಹೋಗಿ ತರಕಾರಿ ಖರೀದಿಸುವುದು, ಸಮಯಕ್ಕೆ ಸರಿಯಾಗಿ ಕರೆಂಟು, ನೀರು, ಟೆಲಿಫೋನಿನ ಬಿಲ್‌ಗಳನ್ನು ಪಾವತಿಸುವುದು, ಹೀಗೆ ಎಲ್ಲವನ್ನೂ ಅವರೇ ಸ್ವತಃ ಮಾಡುತ್ತಿದ್ದರು. ಅಷ್ಟೇ ಅಲ್ಲ ಹತ್ತು ವರ್ಷದ ಮೊಮ್ಮಗನನ್ನು ತನ್ನ ಸ್ಕೂಟರಿನಲ್ಲಿಯೇ ಶಾಲೆಗೆ, ಟ್ಯೂಶನ್ನಿಗೆ ಕರೆದುಕೊಂಡು ಹೋಗಿ ಮರಳಿ ಕರೆತರುತ್ತಿದ್ದರು. ಮಗ ಮತ್ತು ಸೊಸೆ ತಮ್ಮ ತಮ್ಮ ಕೆಲಸದಲ್ಲಿ ವ್ಯಸ್ತರು. ಅವರಿಗೆ ಮನೆಯ ಚಿಂತೆ ಸ್ವಲ್ಪವೂ ಇರಲಿಲ್ಲ.

ಹೊರಗಿನ ಕೆಲಸ ಭಾವ್ಯಾ ನೋಡಿಕೊಂಡರೆ, ಅಡುಗೆ ಜವಾಬ್ದಾರಿಯನ್ನು ಸ್ವತಃ ಸಾವಿತ್ರಿಯೇ ನಿಭಾಯಿಸುತ್ತಿದ್ದರು. ಎಲ್ಲವೂ ನಿರಾತಂಕವಾಗಿ ಸಂತೋಷದಿಂದ ಸಾಗುತ್ತಿತ್ತು. ಮನೆಯಲ್ಲಿ ಭಾವ್ಯಾ ಮಾತಿಗೆ ಮನ್ನಣೆ ಇರುತ್ತಿತ್ತು. ಅವರಿಗೆ ವಿರುದ್ಧವಾಗಿ ಯಾರೂ ಚಕಾರ ಎತ್ತುತ್ತಿರಲಿಲ್ಲ.

ಎಲ್ಲವೂ ಹೀಗೆ ವ್ಯವಸ್ಥಿತವಾಗಿ ನಡೆಯುತ್ತಿರುವಾಗ ಒಂದು ದಿನ ಭಾವ್ಯಾ ವರ್ತನೆಯಲ್ಲಿ ಉಂಟಾಗಿರುವ ಬದಲಾವಣೆ ಸಾವಿತ್ರಿಯ ಗಮನಕ್ಕೆ ಬಂತು. ಭಾವ್ಯಾ ಎರಡು ಮೂರು ಬಾರಿ ಸಾವಿತ್ರಿಯನ್ನು ಸಿಟ್ಟಿನಿಂದ